ಅಂದ್ಮೇಲೆ ಇದ್ದು ಏನು ಪ್ರಯೋಜನ. ಒಂದಿಷ್ಟು ಹಣವಾದರೂ ಉಳಿಯುತ್ತೆ.

ತಡರಾತ್ರಿ ಬೀದರಿಗೆ ಬಸ್ಸು ಇರುವುದು ನೆನಪಾಯಿತು. ಒಮ್ಮೊಮ್ಮೆ ಅದು ತಡವಾಗಿಯೂ ಹೊರಡುತ್ತದೆ ಎನ್ನುವುದು ಅವನಿಗೆ ಗೊತ್ತಿತ್ತು. ಬೇಗನೆ ತನ್ನ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಂಡು ರೂಮು ಖಾಲಿ ಮಾಡಿದ. ಕಾರಿಡಾರಿನಲ್ಲಿ ಥಾಮಸ್ ಕಾಣಲಿಲ್ಲ. ಅವನಿಗೆ ಒಂದಿಷ್ಟು ಟಿಪ್ಸ್ ಕೊಡುವ ಮನಸ್ಸು ಬಂದಿತ್ತು. ಆದರೆ ಅವನೇ ಕಾಣಿಸಲಿಲ್ಲ.

ಲಿಫ್ಟಿನಲ್ಲಿ ಕೆಳಗಿಳಿಯುವಾಗ ಇನ್ನೊಬ್ಬ ಹೋಟೆಲಿನ ಹುಡುಗ ಸಿಕ್ಕಿದ.

"ಥಾಮಸ್ ಎಲ್ಲಿ ಕಾಣಿಸ್ತಿಲ್ಲ?" ಎಂದ.

"ಥಾಮಸ್? ಯಾವ ಥಾಮಸ್ ಸಾರ್?" ಅಚ್ಚರಿಯಿಂದ ಅವನು ಕೇಳಿದ.

"ಅದೇ ಸೆಕೆಂಡ್ ಫ್ಲೋರ್ ರೂಮ್‌ಬಾಯ್ ಥಾಮಸ್. ಅವನಿಗೆ ಈ ದುಡ್ಡು ಕೊಡ್ತೀಯಾ ಮರೆಯದೆ? ಇನ್ನೂರೊಂಬತ್ತಿನಲ್ಲಿದ್ದ ರೂಮಿನವರು ಕೊಟ್ರು ಅಂತ ಹೇಳು."

ನೂರರ ನೋಟೊಂದನ್ನು ಅವನ ಕೈಗಿಡಲು ಹೋದ ರೋಹಿತ್.

"ಅವನಿದ್ರೆ ತಾನೆ ಸಾರ್ ಕೊಡೋದು? ತಿಂಗಳ ಹಿಂದೆ ಆತ್ಮಹತ್ಯೆ ಮಾಡ್ಕೊಂಡ್ನಲ್ಲ? ಆ ಸುದ್ದಿ ನಿಮಗೆ ಗೊತ್ತಿಲ್ವೆ ಸಾರ್?"

"ಹಾ... ಹಾ?... ಹೌದೆ ಮತ್ತೆ... ಅಲ್ಲಿ... ಅವನು?" ರೋಹಿತ್ ತೊದಲಿದ! ಚಳಿ ಬಂದತಾಯಿತು!

"ಮತ್ತೆ ಕಾಣಿಸಿದನಾ ಸಾರ್?... ಆಗಾಗ್ಗೆ ಅವನು ಕಾಣಿಸ್ಕೊಳ್ತಿದ್ದಾನೆ... ಅದು ಅವನ ದೆವ್ವ."

ಆ ಮಾತಿಗೆ ರೋಹಿತ್ ಅಲುಗಾಡದೆ ನಿಂತ!


## ಎಸ್.ಜಿ. ಶಿವಶಂಕರ್

ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲಿ ಎರಡೂವರೆ ದಶಕಗಳಿಗಿಂತಲೂ ಹೆಚ್ಚುಕಾಲ ಎಂಜಿನಿಯರ್ ಆಗಿ, ಪ್ರಾಧ್ಯಾಪಕರಾಗಿ ಏಳು ವರ್ಷ ಕೆಲಸ ಮಾಡಿರುವ ಶಿವಶಂಕರ್ ಪ್ರಸ್ತುತ ಮೈಸೂರಿನಲ್ಲಿ ನಿವೃತ್ತ
ಜೀವನ ನಡೆಸುತ್ತಿದ್ದಾರೆ. ಬರವಣಿಗೆ, ನಾಟಕ ರಚನೆ, ನಿರ್ದೇಶನ, ನಟನೆ, ವಚನ ಸಾಹಿತ್ಯ ಮತ್ತು ವಿಜ್ಞಾನದಲ್ಲಿ ವಿಶೇಷ ಆಸಕ್ತಿ. ನಾಲ್ಕು ಕಾದಂಬರಿಗಳು, ತಲಾ ಎರಡು ಕತೆ, ಕವನ, ಹಾಸ್ಯ ಲೇಖನಗಳ ಸಂಕಲನಗಳು, 12 ನಾಟಕಗಳು ಪ್ರಕಟವಾಗಿವೆ.